# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ</u>

ಎಸ್.ಸಿ. ನಂ. 97/2023

ಪಿಡಬ್ಲ್ಯೂ: 02
ಸಿಡಬ್ಲ್ಯೂ: 04

**<u>ದಿನಾಂಕ: 29-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

| | |
|---|---|
| ಸಾಕ್ಷಿದಾರರ ಹೆಸರು | : ಶಿವಲಿಂಗಪ್ಪ |
| ತಂದೆಯ ಹೆಸರು | : ಯಳಿಯಪ್ಪ |
| ವಯಸ್ಸು | : 29 ವರ್ಷ |
| ಉದ್ಯೋಗ | : ವ್ಯಾಪಾರ |
| ವಾಸ ಸ್ಥಳ | : ಜೋಡಿಶ್ರೀರಾಂಪುರ ಗೊಲ್ಲರಹಟ್ಟಿ |

**<u>ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರವರಿಂದ:</u>**

ನನಗೆ ಪ್ರಾಸಾ–**1** / ಬಸವರಾಜ್ ಹಾಗೂ ಚಾಸಾ–**5**/ ರಂಗನಾಥ ಇವರ ಗುರುತು ಇದೆ. ಅದೇ ರೀತಿ ಆರೋಪಿತರ ಗುರುತು ಕೂಡಾ ಇದೆ. ದಿನಾಂಕ **07–11–2022** ರಂದು ನಾನು ಮತ್ತು ರಂಗನಾಥ ಜೋಡಿ ಶ್ರೀರಾಂಪುರ ಗೊಲ್ಲರಹಟ್ಟಿಯಿಂದ ಹೊಸದುರ್ಗಕ್ಕೆ ಬರುತ್ತಿದ್ದೆವು, ಆಗ ಸಂಜೆ **4.30** ಗಂಟೆಯಾಗಿತ್ತು. ಹೊಸದುರ್ಗದ ಬಳಿ ಅರಣ್ಯ ಇಲಾಖೆ ಕಛೇರಿ ಬಳಿ ಗಲಾಟೆಯಾಗುತ್ತಿತ್ತು. ನಮಗೆ ಆರೋಪಿತರು ಹಾಗೂ ಬಸವರಾಜ್ ಗೊತ್ತಿದ್ದ ಕಾರಣ ಅವರ ಬಳಿ ಹೋದೆವು. ಅಲ್ಲಿ ನೋಡಲಾಗಿ **2** ಮತ್ತು **3** ನೇ ಆರೋಪಿತರು ಬಸವರಾಜನನ್ನು ಹಿಡಿದುಕೊಂಡಿದ್ದರು. ನಾವು ಅಲ್ಲಿಗೆ ಹೋಗುವಷ್ಟರಲ್ಲಿ **1** ನೇ ಆರೋಪಿ ಬಸವರಾಜನ ಎಡ ಹುಬ್ಬಿನ ಮೇಲೆ ಮತ್ತು ಹೊಟ್ಟೆಯ ಭಾಗದಲ್ಲಿ ಬ್ಲೇಡಿನಿಂದ ಗಾಯಪಡಿಸಿದ್ದ. ಆಗ **1** ನೇ ಆರೋಪಿ ನಾವು ಬಂದಿದ್ದನ್ನು ನೋಡಿ ಈ ದಿನ ಶಿವಲಿಂಗ ಮತ್ತು ರಂಗನಾಥ ಬಂದಿದ್ದಾರೆ ಕಾರಣ ನಿನ್ನನ್ನು ಬಿಡುತ್ತಿದ್ದೇನೆ ಮತ್ತು ಒಂದಿಲ್ಲೊಂದು ದಿನ ಕೊಲೆ ಮಾಡುತ್ತೇನೆಂದು ಬಸವರಾಜನಿಗೆ ಹೇಳಿದನು. ಬಸವರಾಜನಿಗೆ ಆದಂತಹ ಗಾಯಗಳಿಂದಾಗಿ ರಕ್ತ ಸೋರುತ್ತಿತ್ತು. ಕೂಡಲೇ ನಾನು ಮತ್ತು ರಂಗನಾಥ ಒಂದು ಆಟೋ ಮಾಡಿಕೊಂಡು ಆತನನ್ನು ಹೊಸದುರ್ಗದ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋದೆವು. ಆ ಗಲಾಟೆಯು ಮಂಜುನಾಥ ಲಾಡ್ಜ್, ಮರ್ಚೆಂಟ್ ಪೆಟ್ರೋಲ್ ಪಂಪ್ ಇರುವಂತಹ ಸ್ಥಳದಲ್ಲಿ ಹೊಸದುರ್ಗದಲ್ಲಿ ಬರುತ್ತದೆ. ಬಸವರಾಜನ ಶರ್ಟಿಗೆ ರಕ್ತ ಹತ್ತಿತ್ತು. ಬ್ಲೇಡ್ ಹಾಕಿದ ಜಾಗದಲ್ಲಿ ಶರ್ಟು ಹರಿದಿತ್ತು. ಅಲ್ಲದೇ ಆ ಸ್ಥಳದಲ್ಲಿ ಬಸವರಾಜನ ಚಪ್ಪಲಿ ಬಿದ್ದಿತ್ತು. ಶರ್ಟು ಹಾಗೂ ಚಪ್ಪಲಿಯನ್ನು ನೋಡಿದರೆ ಗುರುತಿಸಬಲ್ಲೆ. ಅವುಗಳನ್ನು ನೋಡುತ್ತಿದ್ದು ಮುದ್ದೆ ಮಾಲು **1** ಹಾಗೂ **2** ಎಂದು ಈಗಾಗಲೇ ಗುರುತಿಸಲಾಗಿದೆ. ತನಿಖಾಧಿಕಾರಿಗೆ ಘಟನೆಯನ್ನು ನೋಡಿದ್ದರ ಕುರಿತು ಹೇಳಿಕೆ ಕೊಟ್ಟಿದ್ದೇನೆ.

**<u>ಪಾಟೀ ಸವಾಲು:</u>** ಶ್ರೀ ಎಸ್.ಸಿ.ಆರ್. ವಕೀಲರು ಗೈರು ಹಾಜರಿದ್ದು ಆರೋಪಿತರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಸಾಕ್ಷಿದಾರರ ವೆಚ್ಚವನ್ನು ನೀಡುವ ಷರತ್ತಿನೊಂದಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.

## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ

ಎಸ್.ಸಿ. ನಂ. 97/2023

ಪಿಡಬ್ಲ್ಯೂ: 01
ಸಿಡಬ್ಲ್ಯೂ: 01

**ದಿನಾಂಕಃ 29-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು | : ಬಸವರಾಜ್ |
| ತಂದೆಯ ಹೆಸರು | : ತಿಮ್ಮಪ್ಪ |
| ವಯಸ್ಸು | : 35 ವರ್ಷ |
| ಉದ್ಯೋಗ | : ವ್ಯವಸಾಯ |
| ವಾಸ ಸ್ಥಳ | : ಮಸ್ತಿಹಳ್ಳಿ ಗೊಲ್ಲರಹಟ್ಟಿ |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

ಚಾಸಾ–**4** / ಶಿವಲಿಂಗಪ್ಪ ಜೋಡಿಶ್ರೀರಾಂಪುರ ಗೊಲ್ಲರಹಟ್ಟಿ ಊರಿನವರು. ಚಾಸಾ–**5**/ ರಂಗನಾಥ ದೇವಿಪುರ ಬೋವಿಹಟ್ಟಿಯವರು. **1** ನೇ ಆರೋಪಿ ನನ್ನ ದೊಡ್ಡಪ್ಪನ ಮಗ ಮತ್ತು ಆತ ನನಗೆ ಅಣ್ಣನಾಗಬೇಕು. **2** ನೇ ಆರೋಪಿ ಆತನ ಮಗಳು. **3** ನೇ ಆರೋಪಿ **1** ನೇ ಆರೋಪಿತನ ತಾಯಿ. ದಿನಾಂಕ **07–11–2022** ರಂದು ಮದ್ಯಾಹ್ನ **3.30** ಗಂಟೆಗೆ ನಾನು ತರಕಾರಿ ತೆಗೆದುಕೊಂಡು ಹೊಸದುರ್ಗದ ಹಿರಿಯೂರು ಸರ್ಕಲ್ ನಲ್ಲಿ ಬಸ್ಸಿಗಾಗಿ ಕಾಯುತ್ತಿದ್ದೆ. ಆಗ ಊರಲ್ಲಿ ನಡೆದ ಪಂಚಾಯಿತಿ ವಿಷಯವಾಗಿ ನನ್ನ ಮೇಲೆ ದ್ವೇಷ ಇಟ್ಟುಕೊಂಡು **1** ರಿಂದ **3** ನೇ ಆರೋಪಿತರು ಇಷ್ಟು ದಿನದವರೆಗೆ ನೀನು ಸಿಕ್ಕಿಲ್ಲ ಇವತ್ತು ಸಿಕ್ಕಿದ್ದೀಯಾ ಎಂದು ನನ್ನ ಕೊರಳಪಟ್ಟಿ ಹಿಡಿದು ಹೊಡೆದರು. ಅಲ್ಲದೇ ನನ್ನ ಅಂಗಿಯನ್ನು ಹರಿದರು. **1** ನೇ ಆರೋಪಿ ನನ್ನ ಅಂಗಿಯನ್ನು ಹಿಡಿದು ಚಪ್ಪಲಿಯಿಂದ ನನ್ನ ಮುಖಕ್ಕೆ ಮತ್ತು ಕೈಗಳಿಗೆ ಹೊಡೆದ. **2** ನೇ ಆರೋಪಿತಳು ಕೂಡಾ ಚಪ್ಪಲಿಯಿಂದ ನನಗೆ ಹೊಡೆದಳು. **3** ನೇ ಆರೋಪಿ ನನ್ನ ಕೈಗಳನ್ನು ಹಿಡಿದುಕೊಂಡಳು. **1** ನೇ ಆರೋಪಿ ಬ್ಲೇಡನ್ನು ತೆಗೆದುಕೊಂಡು ನನ್ನ ಕುತ್ತಿಗೆಗೆ ಹಾಕಲು ಬಂದ, ನಾನು ತಪ್ಪಿಸಿಕೊಂಡಾಗ ನನ್ನ ಎಡ ಉಬ್ಬಿನ ಹತ್ತಿರ ತರಿದ ಗಾಯ ಆಯಿತು. ನಾನು ಕೆಳಗೆ ಬಿದ್ದಾಗ ನನ್ನ ಎಡಗಡೆ ಹೊಟ್ಟೆಯ ಭಾಗಕ್ಕೆ ಆ ಬ್ಲೇಡಿನಿಂದ **1** ನೇ ಆರೋಪಿ ಗಾಯಪಡಿಸಿದ. ಆಗ ಶಿವಲಿಂಗ ಮತ್ತು ರಂಗನಾಥ ಇವರುಗಳು ಬಂದರು. ಆಗ ಆರೋಪಿತರು ಇನ್ನೊಂದು ಸಾರಿ ನೀನು ಸಿಗು ನಿನ್ನನ್ನು ಮುಗಿಸೇ ಬಿಡುತ್ತೇವೆ ಈ ದಿನ ನೀನು ಬಚಾವ್ ಆಗಿದ್ದೀಯಾ ಎಂದು ಅಂದರು. ಜಗಳದಲ್ಲಿ ನನಗೆ ಸೂಳೇಮಗನೆ, ಬೋಳಿಮಗನೆ ಎಂದು ಬೈದರು. ಗ್ರಾಮದಲ್ಲಿ ಪಂಚಾಯಿತಿ ಕಾಲಕ್ಕೆ ನೀನು ಊರವರ ಪರವಾಗಿ ಮಾತನಾಡಿದ್ದೀಯಾ ನಿನ್ನ ಅಣ್ಣನ ಪರವಾಗಿ ಮಾತನಾಡಲಿಲ್ಲ ಎಂದು **1** ನೇ ಆರೋಪಿ ನನಗೆ ಹಲ್ಲೆ ಮಾಡಿದ. ನನ್ನ ಸಾಯಿಸಬೇಕೆಂಬ ಉದ್ದೇಶದಿಂದ ಬ್ಲೇಡಿನಿಂದ ನನ್ನ ಮೇಲೆ ಹಲ್ಲೆ ಮಾಡಲಾಯಿತು. ಆತ ಎಡಗಡೆ ಹೊಟ್ಟೆಯ ಭಾಗಕ್ಕೆ ಬ್ಲೇಡ್ ಹಾಕಿದ್ದರಿಂದ ಆ ಭಾಗದಲ್ಲಿಯ ಶರ್ಟು

ಹರಿದುಹೋಯಿತು ಮತ್ತು ಅದಕ್ಕೆ ರಕ್ತ ತಗಲಿತ್ತು. ಅಲ್ಲದೇ ನನ್ನ ಎಡ ಉಬ್ಬಿನ ಮೇಲೂ ಕೂಡಾ ರಕ್ತಗಾಯವಾಯಿತು ಮತ್ತು ಅದು ಶರ್ಟಿಗೆ ತಗಲಿತ್ತು.

**2.** ಒಂದು ಆಟೋದಲ್ಲಿ ಸದರಿ ಶಿವಲಿಂಗ ಹಾಗೂ ರಂಗನಾಥ ನನ್ನನ್ನು ಹೊಸದುರ್ಗದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಸೇರಿಸಿದರು. ಆ ಗಲಾಟೆಯಾದಾಗ ಮದ್ಯಾಹ್ನ **4.30** ಗಂಟೆಯಾಗಿತ್ತು. ಆಸ್ಪತ್ರೆಯಲ್ಲಿ ನನ್ನ ಗಾಯಗಳಿಗೆ ಹೊಲಿಗೆ ಹಾಕಲಾಯಿತು. ನಾನು ಆಸ್ಪತ್ರೆಯಲ್ಲಿದ್ದಾಗಲೇ ಪೊಲೀಸರು ಅಲ್ಲಿಗೆ ಬಂದು ನನ್ನಿಂದ ದೂರನ್ನು ಪಡೆದುಕೊಂಡರು. ಆ ದೂರನ್ನು ನೋಡುತ್ತಿದ್ದು ಅದನ್ನು ನಿಪಿ–**1** ಎಂದು ನನ್ನ ಸಹಿಯನ್ನು ನಿಪಿ–**1**(ಎ) ಎಂದು ಗುರುತಿಸಲಾಯಿತು. ಘಟನಾ ಕಾಲಕ್ಕೆ ನನ್ನ ಬಲಗಾಲಿನ ಚಪ್ಪಲಿ ಆ ಸ್ಥಳದಲ್ಲೇ ಬಿತ್ತು.

**3.** ದಿನಾಂಕ **08–11–2022** ರಂದು ಪೊಲೀಸರು ಸಂಜೆ **5.00 – 5.45** ಗಂಟೆಗೆ ಆ ಕೃತ್ಯ ನಡೆದ ಸ್ಥಳಕ್ಕೆ ಮಹಜರಿಗೆ ಬಂದಿದ್ದು ಅವರಿಗೆ ಆ ಸ್ಥಳವನ್ನು ನಾನು ತೋರಿಸಿದೆ. ಆಗ ಚಾಸಾ–**2** ಮತ್ತು **3** ಅಂದರೆ ರಂಗಪ್ಪ ಹಾಗೂ ಮಂಜುನಾಥರವರುಗಳು ಹಾಜರಿದ್ದರು. ಆ ಕಾಲಕ್ಕೆ ಪೊಲೀಸರು ನನ್ನ ಹರಿದಂತಹ ಶರ್ಟನ್ನು ಮತ್ತು ಚಪ್ಪಲಿಯನ್ನು ಆ ಸ್ಥಳದಿಂದ ಅಮಾನತ್ತುಪಡಿಸಿಕೊಂಡರು. ನಾನು ಅಲ್ಲಿ ತಯಾರಿಸಲಾದ ಮಹಜರ್ ಹಾಗೂ ನಕಾಶೆಗೆ ಸಹಿಗಳನ್ನು ಮಾಡಿದ್ದು ಮಹಜರನ್ನು ನಿಪಿ–**2** ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಪಿ–**2**(ಎ) ಎಂದು**,** ನಕಾಶೆಯನ್ನು ನಿಪಿ–**3** ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಪಿ–**3**(ಎ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಫೋಟೋಗಳನ್ನು ತೆಗೆಯಲಾಗಿದ್ದು ಅವುಗಳನ್ನು ನೋಡುತ್ತಿದ್ದು ಸದರಿ ಫೋಟೋಗಳನ್ನು ನಿಪಿ–**4** ಹಾಗೂ **5** ಎಂದು ಗುರುತಿಸಲಾಯಿತು. ನನ್ನ ಶರ್ಟು ಹಾಗೂ ಚಪ್ಪಲಿ ಇವುಗಳನ್ನು ನೋಡಿದರೆ ಗುರುತಿಸಬಲ್ಲೆ. (ಸೀಲು ಮಾಡಿದ ಬಟ್ಟೆಯ ಚೀಲವನ್ನ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಆರೋಪಿತರ ಸಮಕ್ಷಮ ತೆರೆಯಲಾಯಿತು.) ನನ್ನ ಶರ್ಟನ್ನು ನೋಡುತ್ತಿದ್ದು ಅದನ್ನು ಮುದ್ದೆ ಮಾಲು **1** ಎಂದು ಮತ್ತು ಚಪ್ಪಲಿಯನ್ನು ಮುದ್ದೆ ಮಾಲು **2** ಎಂದು ಗುರುತಿಸಲಾಯಿತು. ನನಗೆ ಹಲ್ಲೆ ಮಾಡಲು ಬಳಸಿದ ಬ್ಲೇಡನ್ನು ನೋಡಿದರೆ ಗುರುತಿಸಬಲ್ಲೆ.

**ಪಾಟೀ ಸವಾಲು:** ಶ್ರೀ ಎಸ್.ಸಿ.ಆರ್. ವಕೀಲರು ಗೈರು ಹಾಜರಿದ್ದು ಆರೋಪಿತರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಸಾಕ್ಷಿದಾರರ ವೆಚ್ಚವನ್ನು ನೀಡುವ ಷರತ್ತಿನೊಂದಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ